
(Foote). ಚುರುಕು ವಕೀಲ ಆಗಿದ್ದರಿಂದ ಈ ಕುಟುಂಬದ ದಾವೆಯನ್ನೆಲ್ಲ ಗೆದ್ದರು. ಜೊತೆಗೆ ಪಾಲಿಟೆಕ್ನಿಕ್ ಓದುತ್ತಿದ್ದ ಯುವತಿ ಯೂನಿಸ್ ಅವರ ಹೃದಯವನ್ನೂ ಗೆದ್ದರು.

ಇಬ್ಬರೂ ವಿವಾಹವಾದರು. ಯೂನಿಸ್ ನ್ಯೂಟನ್ ಹೆಸರು ಈಗ ಯೂನಿಸ್ ನ್ಯೂಟನ್ ಫೂಟ್ (Eunice Newton Foote) ಆಯಿತು. ಇಬ್ಬರೂ ನ್ಯೂಯಾರ್ಕಿನ ಸಮೀಪದ ಸೆನೆಕಾ ಫಾಲ್ಸ್ ಎಂಬ ಊರಲ್ಲಿ ನೆಲೆಸಿದರು. ಅಲ್ಲಿ ಆಗ ಮಹಿಳಾ ಹಕ್ಕುಗಳಿಗಾಗಿ ಭಾರೀ ಸಮ್ಮೇಳನ, ಕಾನೂನಿನ ತಿದ್ದುಪಡಿ ವಿವಾದ, ನ್ಯಾಯಾಲಯದಲ್ಲಿ ಕಟ್ಟಳೆಗಳೆಲ್ಲ ನಡೆಯುತ್ತಿದ್ದವು. ಸಹಜವಾಗಿ ಈ ದಂಪತಿಯೂ ಅದರಲ್ಲಿ ಪಾಲ್ಗೊಂಡರು. ಮಹಿಳೆಯರ ಪರವಾಗಿ ಯೂನಿಸ್ ಗಂಡ ಎಲಿಶಾ ಫೂಟ್ ಮಹಾಶಯ ಕೋರ್ಟಿನಲ್ಲಿ ವಕೀಲಿ ಮಾಡುತ್ತಿದ್ದರು. ಕ್ರಮೇಣ ಇಬ್ಬರೂ ಆ ಊರಿನ ಗಣ್ಯ ದಂಪತಿ ಎನಿಸಿದರು.

## ಯೂನಿಸ್ ಮನೆಯೇ ಪ್ರಯೋಗಾಲಯ!

ಪ್ರಾಯೋಗಿಕ ವಿಜ್ಞಾನದಲ್ಲಿ ತರಬೇತಿ ಪಡೆದಿದ್ದ ಯೂನಿಸ್ ಅವರಿಗೆ ಅದನ್ನು ನಿತ್ಯಜೀವನದಲ್ಲಿ ಅಳವಡಿಸಲು ಎಲ್ಲಿಲ್ಲದ ಆಸಕ್ತಿ ಇತ್ತು. ಮನೆಯ ಕೆಲಸಗಳನ್ನು ತುಸು ಸಲೀಸು ಮಾಡಬಲ್ಲ ಸಣ್ಣ ಪುಟ್ಟ ತಾಂತ್ರಿಕ ಸರಂಜಾಮುಗಳನ್ನು ಯೂನಿಸ್ ತಾವೇ ರೂಪಿಸುತ್ತಿದ್ದರು. ನಿತ್ಯ ಬಳಸುವ ಸಾಧನ ಸಲಕರಣೆಗಳನ್ನು ಇನ್ನೂ ಸುಧಾರಣೆ ಮಾಡಲು ಸಾಧ್ಯವೇ ಎಂದು ಯೋಚಿಸುತ್ತಿದ್ದರು. ಅದಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಡಲು ಅವರ ಪತಿ ಸದಾ ಸಿದ್ಧವಿದ್ದರು. ಪಾದರಕ್ಷೆ ಧರಿಸಿ ಓಡಾಡುವಾಗಲೆಲ್ಲ ಚರ್‌ಪರ್ ಎಂಬ ಕಿರಿಕಿರಿ ಸದ್ದನ್ನು ನಿವಾರಿಸಬಲ್ಲ ಒಳಕವಚವೊಂದನ್ನು




ಯೂನಿಸ್ ಫೂಟ್ ರೂಪಿಸಿದ ರೋಲರ್ ಕಾಗದ ತಯಾರಿಕಾ ಯಂತ್ರ

ಯೂನಿಸ್ ತಯಾರಿಸಿದರು. ಹಿಮದಲ್ಲಿ ಸ್ಕೇಟಿಂಗ್ ಮಾಡುವಾಗ ಧರಿಸುವ ಜಾರುಪಾದದ ವಿನ್ಯಾಸ ಬದಲಿಸಿ ಇನ್ನಷ್ಟು ಸುರಕ್ಷಿತವಾಗುವಂತೆ ಹೊಸ ಸಾಧನ ರೂಪಿಸಿದರು. ಅವೆರಡೂ ಎಲ್ಲರಿಂದ ಮೆಚ್ಚುಗೆ ಪಡೆದವು.

ತಾವು ಮಾಡಿದ್ದನ್ನೆಲ್ಲ ಬರೆದಿಡಲು ಹೊರಟಾಗ ಒರಟು ಕಾಗದ ಕೈಕೊಡುತ್ತಿತ್ತು. ಅದು 1840ರ ದಶಕ. ಆ ದಿನಗಳಲ್ಲಿ ನಾರಿನ ಚೂರುಗಳನ್ನು ನೀರಲ್ಲಿ ನೆನೆಸಿ, ಚಾದರದಂಥ ಜಾಳಿಗೆಯಲ್ಲಿ ಸೋಸಿ ಕಾಗದವನ್ನು ತಯಾರಿಸುತ್ತಿದ್ದರು. ಯೂನಿಸ್ ಕಾಗದ ತಯಾರಿಸಲೆಂದೇ ರೋಲರ್ ಯಂತ್ರ ರೂಪಿಸಿದರು. ಅಡ್ಡ ಮಲಗಿಸಿದ ಕಬ್ಬಿನ ಗಾಣದ ಹಾಗೆ, ಎರಡು ಬಿಸಿ ಡ್ರಮ್‌ಗಳ ಮಧ್ಯೆ ಒದ್ದೆ ನಾರಿನ ಹಾಸನ್ನು ತೂರಿಸಿದಾಗ ಅದು ಕಾಗದದ ಹಾಳೆಯಾಗಿ ಇನ್ನೊಂದು ಕಡೆ ಹೊರಕ್ಕೆ ಬರುತ್ತಿತ್ತು. ಇಷ್ಟು ಸರಳ ಸಾಧನ ನಮಗೇಕೆ ಹೊಳೆಯಲಿಲ್ಲ ಎಂದು ಅಂದಿನ ಕಾಲದ ಎಂಜಿನಿಯರ್‌ಗಳು ಅಂದುಕೊಂಡಿರಬೇಕು. ಹೋಗಿ ಹೋಗಿ, ಮಹಿಳೆಯೊಬ್ಬಳಿಗೆ ಈ ವಿಚಾರ ಹೊಳೆಯಿತಲ್ಲ ಎಂದು ಅಸೂಯೆಪಟ್ಟಿರಲೂ ಸಾಕು.

ಮುಂದೆ ಯೂನಿಸ್ ಅಡುಗೆ ಮಾಡುವ ಸ್ಟವ್ ಕಡೆ ಗಮನಹರಿಸಿದರು. ಶಾಖ ತೀರಾ ಹೆಚ್ಚಾಗಿ ಅಡುಗೆ ಸೀದು ಹೋಗಬಾರದು ಅಥವಾ ಶಾಖ ಕಡಿಮೆಯಾಗಿ ಬೇಯದೆಯೂ ಇರಬಾರದು – ಹಾಗೆ ನಿಯಂತ್ರಣ ಮಾಡಬಲ್ಲ ಥರ್ಮೊಸ್ಟಾಟ್ ಒಂದನ್ನು ರೂಪಿಸಿದರು. ಅದೂ ಜನಪ್ರಿಯವಾಯಿತು.

ಬೇರೆಯವರೂ ಇವರ ಸಂಶೋಧನೆಗಳನ್ನು ಬಳಸಿಕೊಳ್ಳತೊಡಗಿದರು. ಇವರು ರೂಪಿಸಿದ ಸಾಧನಗಳು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ, ಮಾರಾಟ ಆಗುತ್ತಿದ್ದರೆ ಆ ಲಾಭದ ಒಂದು ಪಾಲು ಇವರಿಗೂ ಸಿಗಬೇಕು ತಾನೆ? 'ಇಂಥ ಎಲ್ಲ ಹೊಸ ಹೊಸ ಸಂಶೋಧನೆಗಳಿಗೂ ಪೇಟೆಂಟ್ ಪಡೆಯಬೇಕು' ಎಂದರು ಪೇಟೆಂಟ್ ಕಾನೂನುಗಳಲ್ಲಿ ನುರಿತ ಗಂಡ ಎಲಿಶಾ. ಆದರೆ ಆಗಿನ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ಪೇಟೆಂಟ್ ಕೊಡುವ ವ್ಯವಸ್ಥೆಯೇ ಇರಲಿಲ್ಲ. ಗಂಡನ ಹೆಸರಲ್ಲಿ ಅಥವಾ ಬೇರಾರೋ ಬಂಧುಮಿತ್ರ ಗಂಡಸಿನ ಹೆಸರಿನಲ್ಲೇ ಅರ್ಜಿ ಹಾಕಬೇಕು. ಗಂಡ, ಹೆಂಡತಿ ಸೇರಿ ಪೇಟೆಂಟ್ ಪಡೆಯುತ್ತಾ ಹೋದರು. ಮೆಸಾಚುಸೆಟ್‌ನ ಕಂಪನಿಯೊಂದು ಯೂನಿಸ್ ಆವಿಷ್ಕರಿಸಿದ ಪೇಪರ್ ರೋಲರ್ ಯಂತ್ರ ಬಳಸಿ ದಿನಕ್ಕೆ 157 ಡಾಲರ್ ಹಣ ಉಳಿತಾಯವಾಗುತ್ತಿದೆ ಎಂದು ಹೊಗಳಿತ್ತು. ಪತ್ನಿಯ ತಾಂತ್ರಿಕ ಕೌಶಲದ ಬಗ್ಗೆ ಹೆಮ್ಮೆಪಡುತ್ತ ಎಲಿಶಾ ತಾವೂ ಯೂನಿಸ್‌ಗೆ ಸಹಾಯ ಮಾಡುತ್ತ, ಎಂಜಿನಿಯರಿಂಗ್ ಕೆಲಸದಲ್ಲಿ ಆಸಕ್ತಿ ತೋರಿಸುತ್ತಿದ್ದರು.

1848ರಲ್ಲಿ ಸೆನೆಕಾ ಫಾಲ್ಸ್‌ನಲ್ಲಿ ನಡೆದ ಮೊದಲ ಮಹಿಳಾ ಸಮಾವೇಶದಲ್ಲಿ ಪಾಲ್ಗೊಂಡ ಯೂನಿಸ್ ಮಹಿಳೆಯರ ಸಾಮಾಜಿಕ ಮತ್ತು ಕಾನೂನು ಹಕ್ಕೊತ್ತಾಯದ ಅಂದಿನ ಘೋಷಣಾ ಪತ್ರಕ್ಕೂ ಸಹಿ ಹಾಕಿದರು.

